ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) 1997-98ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿನ ಬಿಜಾಪುರ, ಬನಹಟ್ಟಿ, ಮುಧೋಳ ರಭಕವಿ, ಟಿಕೋಟ ಮತ್ತು ಬಬಲೇಶ್ವರ ಬಸ್ ನಿಲ್ದಾಣಗಳ ಆವರಣಗಳನ್ನು ಡಾಂಬರೀಕರಣಗೊಳಿಸಲು ಅಂದಾಜು ಪಟ್ಟಿಗಳಿಗೆ ಮಂಜೂರಾತಿ ನೀಡಲಾಗಿದೆ. ಬಿಜಾಪುರ ಬನಹಟ್ಟಿ ಮತ್ತು ಮುಧೋಳ ಬಸ್ ನಿಲ್ದಾಣಗಳ ಆವರಣಗಳಿಗೆ ಡಾಂಬರೀಕರಣ ಮಾಡುವ ಕೆಲಸವು ಪೂರ್ಣಗೊಂಡಿರುತ್ತದೆ. ರಭಕವಿ ಬಸ್ ನಿಲ್ದಾಣದ ಆವರಣಕ್ಕೆ ಡಾಂಬರೀಕರಣ ಮಾಡುವ ಕೆಲಸವು ಪ್ರಗತಿಯಲ್ಲಿರುತ್ತದೆ. ಟಿಕೋಟ ಮತ್ತು ಬಬಲೇಶ್ವರ ಬಸ್ ನಿಲ್ದಾಣಗಳ ಆವರಣಗಳಿಗೆ ಡಾಂಬರೀಕರಣ ಮಾಡಲು ಗುತ್ತಿಗೆದಾರರುಗಳಿಂದ ಟೆಂಡರ್‌ಗಳನ್ನು ಸ್ವೀಕರಿಸಲಾಗಿ ಟೆಂಡರ್‌ಗೆ ಒಪ್ಪಿಗೆ ನೀಡಿದ ನಂತರ ಈ ಕೆಲಸಗಳನ್ನು ಕೈಗೊಳ್ಳಲಾಗುವುದು.

ಆ) ಬಂದಿದೆ.

ಇ) ಈ ಕೆಲಸವನ್ನು 1998-9ನೇ ಸಾಲಿನಲ್ಲಿ ಕೈಗೊಳ್ಳಲಾಗುವುದು.

ಶ್ರೀ ರಾಜಶೇಖರ ವಿ. ಶೀಲವಂತ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಉತ್ತರವನ್ನು ಒದಗಿಸಿದ್ದಾರೆ. ಬಿಜಾಪುರ ಜಿಲ್ಲೆಯ ಟಕೋಟ ಮತ್ತು ಓಬಲೇಶ್ವರ ಮತ್ತು ಮತ್ತಿತರ ಪ್ರಮುಖವಾದಂತಹ ಬಸ್ ನಿಲ್ದಾಣಗಳಲ್ಲಿ ಡಾಂಬರೀಕರಣ ಕೆಲಸ ನಡೆದಿದೆ. 1998-99ನೇ ಗುಳೇದಗುಡ್ಡ ಬಸ್ಸು ನಿಲ್ದಾಣದ ಆವರಣದಲ್ಲೂ ಡಾಂಬರೀಕರಣ ಮಾಡುತ್ತೇವೆನ್ನುವಂತಹ ಉತ್ತರವನ್ನು ಒದಗಿಸಿದ್ದಾರೆ. ತಾವು ಉತ್ತರ ಹೇಳಿದಷ್ಟಕ್ಕೆ ನಿಲ್ಲಬಾರದು, ಅದು ಪ್ರತ್ಯಕ್ಷವಾಗಿ ನಡೆಯುವಂಥಾಗಬೇಕೆಂದು ನಾನು ಒತ್ತಾಯ ಮಾಡುತ್ತೇವೆ.

ಶ್ರೀ ಎಂ. ಸಿ. ನಾಣಯ್ಯ (ಸಾರಿಗೆ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 1997-98ನೇ ಸಾಲಿಗೆ ಗುಳೇದಗುಡ್ಡದ ಬಸ್ ಆವರಣದಲ್ಲಿ ಡಾಂಬರೀಕರಣ ಮಾಡುವಂತಹ ಕಾರ್ಯಕ್ರಮವನ್ನು ಈಗಾಗಲೇ ಹಮ್ಮಿಕೊಂಡಿದ್ದೇವೆ. 1998-99ರ ಬಜೆಟ್‌ನಲ್ಲಿ ನೂರು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಈ ಕೆಲಸವನ್ನು ಡಿಸೆಂಬರ್ ಒಳಗಡೆ ಕಾರ್ಯಕ್ರಮವನ್ನು ಮಾಡಿ ಮುಗಿಸಿಕೊಡುತ್ತೇವೆ.

ಹಾಫ್‌ಕಾಮ್ಸ್ ನೌಕರರನ್ನು ಖಾಯಂಗೊಳಿಸುವುದು

181 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಹಾಫ್‌ಕಾಮ್ಸ್ ನೌಕರರನ್ನು ಖಾಯಂ ಮಾಡಲಾಗಿದೆ?

ಆ) ಖಾಯಂ ಮಾಡುವಾಗ ಅನುಸರಿಸಿರುವ ನೀತಿ ನಿಯಮಗಳೇನು?

ಇ) ಇನ್ನು ಉಳಿದಿರುವ ನೌಕರರನ್ನು ಯಾವಾಗ ಖಾಯಂ ಮಾಡಲಾಗುವುದು (ವಿವರ ನೀಡುವುದು)

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಇದುವರೆಗೆ ಒಟ್ಟು 625 ಜನ ನೌಕರರನ್ನು ಖಾಯಂ ಗೊಳಿಸಲಾಗಿದೆ.

ಆ) ಸಹಕಾರ ಸಂಘಗಳ ನಿಯಮಗಳ ಅನ್ವಯ ಸಂಘದಲ್ಲಿನ ಸೇವಾ ಹಿರಿತನವನ್ನಾಧರಿಸಿ ನೌಕರರನ್ನು ಖಾಯಂಗೊಳಿಸಲಾಗಿದೆ.

ಇ) ಸಂಘದ ಆರ್ಥಿಕ ಸ್ಥಿತಿಗತಿಯನ್ನು ಗಮನಿಸಿ ಉಳಿದ ನೌಕರರುಗಳನ್ನು ಸರ್ಕಾರದ ಅನುಮೋದನೆಗೆ ಒಳಪಟ್ಟು ಖಾಯಂಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಹಾಪ್‌ಕಾಮ್ಸ್ ಸಂಸ್ಥೆಯಲ್ಲಿ ಇದುವರೆಗೂ ಒಟ್ಟು 625 ಜನ ನೌಕರರನ್ನು ಖಾಯಂಗೊಳಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈಗ ತಾತ್ಕಾಲಿಕವಾಗಿ ಎಷ್ಟು ಜನರು ಉಳಿದುಕೊಂಡಿದ್ದಾರೆ? ಅವರನ್ನು ಯಾವಾಗ ಖಾಯಂಗೊಳಿಸುತ್ತೀರಿ? ಇವರನ್ನು ಖಾಯಂಗೊಳಿಸುವುದಕ್ಕೆ ಹಾಪ್‌ಕಾಮ್ಸ್ ಸಂಸ್ಥೆ ಏನಾದರೂ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದೆಯೇ ಎಂಬುದನ್ನು ಮಾನ್ಯ ಸಚಿವರು ಉತ್ತರಿಸಬೇಕೆಂದು ಕೇಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಒಟ್ಟು 1388 ಜನ ನೌಕರರು ಹಾಪ್‌ಕಾಮ್ಸ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಇದರಲ್ಲಿ 625 ಜನ ನೌಕರರನ್ನು ಖಾಯಂ ಮಾಡಿದ್ದೇವೆ. ಇನ್ನು ಉಳಿದಂತಹ ನೌಕರರನ್ನು ಸಂಸ್ಥೆಯಲ್ಲಿ ಕೆಲಸ ಖಾಲಿಯಾದಾಗ ಖಾಯಂ ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ಸಂಸ್ಥೆಗೆ ಆರ್ಥಿಕ ಮುಗ್ಗಟ್ಟು ಏನು ಇಲ್ಲ, ಇದು ಲಾಭದಲ್ಲಿ ನಡೆಯುತ್ತಿದೆ. ಆದುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ಈ ಸಂಸ್ಥೆಗೆ ಆರ್ಥಿಕ ಮುಗ್ಗಟ್ಟು ಇಲ್ಲವೆಂದ ಮೇಲೆ ರಾಜ್ಯದಾದ್ಯಂತ ಹಾಪ್‌ಕಾಮ್ಸ್ ಸಂಸ್ಥೆಯನ್ನು ವಿಸ್ತರಿಸಿ ಹೆಚ್ಚಿಗೆ ಉದ್ಯೋಗಾವಕಾಶವನ್ನು ಏಕೆ ಕೊಡಬಾರದೆನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಈ ತಿಂಗಳಲ್ಲೇ ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಷನ್ (ಕೆ.ಹೆಚ್.ಎಫ್) ಎನ್ನುವಂತಹ ಒಂದು ಸಂಸ್ಥೆಯನ್ನು ಜಾರಿಗೆ ತರುತ್ತಿದ್ದೇವೆ. ಇದರ ಮೂಲ ಉದ್ದೇಶವೇನೆಂದರೆ ಎಲ್ಲಾ ತಾಲ್ಲೂಕುಗಳಿಗೂ ಮತ್ತು ಎಲ್ಲಾ ಜಿಲ್ಲೆಗಳಿಗೂ ಹಾಪ್‌ಕಾಮ್ಸ್ ಸಂಸ್ಥೆಯನ್ನು ಎಕ್ಸ್‌ಟೆಂಡ್ ಮಾಡಲು ಈ ಸಂಸ್ಥೆಯನ್ನು ಜಾರಿಗೆ ತರುತ್ತಿದ್ದೇವೆ. ಈ ತಿಂಗಲ್ಲೆ ಇದರ ಲಾಂಚಿಂಗ್ ಪ್ರೋಗ್ರಾಂ ಮಾಡುತ್ತಿದ್ದೇವೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಹಾಪ್‌ಕಾಮ್ಸ್ ಸಂಸ್ಥೆಗಳಲ್ಲಿ ನೇಮಕ ಮಾಡಿಕೊಂಡಿರುವಂತಹ 1388 ಜನ ನೌಕರರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಎಷ್ಟು ಜನರು ಇದ್ದಾರೆಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಇದು ಹಿಂದೆ ಆಗಿರುವಂತಹ ನೇಮಕಾತಿಯಾಗಿದೆ. ಈಗ ರೋಸ್ಟರ್ ಸಿಸ್ಟಂ ಪ್ರಕಾರ ಮಾಡಬೇಕೆಂದು ಇದೆ. ಆದುದರಿಂದ ಇತ್ತೀಚೆಗೆ ಎಲ್ಲಾ ರೊಸ್ಟರ್ ಪ್ರಕಾರ ಮಾಡಲಾಗುತ್ತಿದೆ.

ಉಡುಪಿಯಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್

182 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲಾ ಸಹಕಾರ ಬ್ಯಾಂಕನ್ನು ಎಂದು ಪ್ರಾರಂಭಿಸಲಾಗುವುದು?

ಆ) ನಿರ್ದೇಶಕರನ್ನು ಆಯ್ಕೆ ಮಾಡಲು ಯಾವ ಮಾರ್ಗಸೂಚಿಗಳನ್ನು ಅನುಸರಿಸಲಾಗುವುದು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕನ್ನು 1959ರ ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ ಕಲಂ 14ರ ಪ್ರಕಾರ ವಿಭಜಿಸಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಜಿಲ್ಲಾ ಬ್ಯಾಂಕುಗಳನ್ನು ಸ್ಥಾಪಿಸಿದರೆ ಎರಡೂ ಜಿಲ್ಲಾ ಬ್ಯಾಂಕುಗಳು ಆರ್ಥಿಕವಾಗಿ ಶಕ್ತವಾಗಿರುವುದೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಇದಕ್ಕಾಗಿ ಹಿರಿಯ ಅಧಿಕಾರಿಗಳ ಸಮಿತಿಯೊಂದನನ್ನು ರಚಿಸಲಾಗುತ್ತಿದೆ. ಹಾಗೂ ವಿಭಜನೆ ವಿಷಯವನ್ನು ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ಇವುಗಳೊಂದಿಗೆ ವ್ಯವಹರಿಸಿದ್ದು, ಮಾರ್ಗಸೂಚಿ ಪ್ರಕಾರ ರಿಸರ್ವ್ ಬ್ಯಾಂಕ್‌ನ ಅನುಮತಿಯನ್ನು ಪಡೆದು, ಹೊಸದಾಗಿ ವಿಭಜನೆ ಮತ್ತು ರಚನೆಗಳನ್ನು ಮಾಡ ಬಹುದಾಗಿರುತ್ತದೆ. ರಿಸರ್ವ್ ಬ್ಯಾಂಕ್ ವಿಧಿಸುವ ಆರ್ಥಿಕ ಸಬಲತೆಯ ಮಾನದಂಡವನ್ನು ಅನ್ವಯಿಸಿ ವಿಭಜನೆ ಪ್ರಸ್ತಾವನೆಯನ್ನು ಪರಿಶೀಲಿಸಿ, ಶೀಘ್ರದಲ್ಲೇ ತೀರ್ಮಾನವನ್ನು ಕೈಗೊಂಡು ಕ್ರಮ ಕೈಗೊಳ್ಳಲಾಗುವುದು.

ಆ) ಬ್ಯಾಂಕಿನ ವಿಭಜನೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಪ್ರತ್ಯೇಕವಾಗಿ ಎರಡು ಬ್ಯಾಂಕುಗಳ ರಚನೆಯ ಬಗ್ಗೆ ತೀರ್ಮಾನವನ್ನು ಕೈಗೊಂಡ ನಂತರ ನಿರ್ದೇಶಕ ಮಂಡಳಿ ರಚನೆ ಬಗ್ಗೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಅನ್ವಯ ಆಡಳಿತ ಮಂಡಳಿಯನ್ನು ರಚಿಸಲು ಕ್ರಮವಿಡಲಾಗುವುದು.

ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಕೊಟ್ಟಿರುವಂತಹ ಉತ್ತರದಲ್ಲಿ ರಿಸರ್ವ್ ಬ್ಯಾಂಕ್‌ನ ಪರ್ಮಿಷನ್ ತೆಗೆದುಕೊಂಡು ನಾವು ವಿಭಜನೆ ಮಾಡುತ್ತೇವೆಂದು ಹೇಳಿದ್ದಾರೆ. ಆ ವಿಭಜನೆ ಮಾಡಿದಾಗ ಈಗ ಇರುವ ಕಾನೂನು ಪ್ರಕಾರ ಹೊಸ ಡೈರಕ್ಟರ್ ಮಂಡಳಿಯನ್ನು ರಚಿಸುತ್ತೇವೆಂದು ಹೇಳಿದ್ದಾರೆ. ಈಗ ಜಿಲ್ಲಾ ಪಂಚಾಯತ್ ವಿಭಜನೆಯಾದಾಗ ಚುನಾಯಿತ ಸದಸ್ಯರು ಆ ಪ್ರದೇಶದಲ್ಲಿ ಯಾರು ಬರುತ್ತಾರೆ, ಅವರನ್ನೇ ಸದಸ್ಯರನ್ನಾಗಿ ಮಾಡುತ್ತೀರಾ? ಈಗ ಜಿಲ್ಲಾ ಪಂಚಾಯತ್‌ಗೆ ಸದಸ್ಯರನ್ನು ನೇಮಕ ಮಾಡುವ ವಿಚಾರದಲ್ಲಿ ತಿದ್ದುಪಡಿಯನ್ನು ತಂದಿರುವ ರೀತಿಯಲ್ಲೇ ಸಹಕಾರಿ ಕಾನೂನಿಗೂ ಅದೇ ರೀತಿಯಲ್ಲಿ ತಿದ್ದುಪಡಿಯನ್ನು ತಂದು